ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 104-111
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೆಟ್ಟದ ಚಾಮುಂಡಿ

**ಉಷಾ ಎನ್* & ಡಾ.ಕೆ.ಸೌಭಾಗ್ಯವತಿ****
*ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಯುವರಾಜ ಕಾಲೇಜು, ಮೈಸೂರು
**ಪ್ರಾಧ್ಯಾಪಕರು, ಕನ್ನಡ ವಿಭಾಗ, ಮೈಸೂರು ವಿಶ್ವವಿದ್ಯಾಲಯ ಸಂಜೆ ಕಾಲೇಜು, ಮೈಸೂರು.

***Abstract:***

*ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಜನಪದ ಗೀತೆಗಳು ಕೂಡ ಒಂದಾಗಿದೆ. ಜನಪದ ಸಾಹಿತ್ಯ ಮಡುಗಟ್ಟಿರುವುದು ಇದರಲ್ಲಿಯೇ. ಜನಪದ ಸಂಸ್ಕೃತಿಯ ಅತ್ಯಮೂಲ್ಯ ಭಾಗವಿದು. ಜನಪದ ಗೀತೆಗಳಲ್ಲಿ ಧಾರ್ಮಿಕ ಗೀತೆಗಳು, ಮಾಂತ್ರಿಕ ಗೀತೆಗಳು, ಭಾವಗೀತೆಗಳು ಮುಂತಾದ ಹಲವಾರು ಪ್ರಕಾರಗಳಿದ್ದರೂ, ವಿದ್ವಾಂಸರ ಗಮನ ಸೆಳೆದಿರುವ ಅತ್ಯಂತ ದೊಡ್ಡ ಭಾಗವೆಂದರೆ ಕಥನಗೀತೆ ಅಥವಾ ಲಾವಣಿ. ಲಾವಣಿಯೆಂದರೆ 'ಕಥೆ ಹೇಳುವ ಗೀತೆ' ಅಥವಾ ಗೀತೆಯ ರೂಪದಲ್ಲ ಹೇಳಿದ ಕಥೆ; ಒಟ್ಟಾಗಿ ಜನಪದ ಗೀತೆಯ ಕಥನರೂಪವೇ ಲಾವಣಿ ಎಂದು ಹೇಳಬಹುದಾಗಿದೆ. ಇಂತಹ ಲಾವಣಿಗಳನ್ನು ಹಾಡುವ ಜನರು ಜಗತ್ತಿನ ಎಲ್ಲ ಕಡೆಗಳಲ್ಲಿಯೂ ಕಾಣ ಸಿಗುತ್ತಾರೆ. ಪ್ರತಿಯೊಂದು ಕಡೆಯಲ್ಲಿಯೂ ನಿರ್ದಿಷ್ಟ ಲಾವಣಿ ಸಂಪ್ರದಾಯಗಳು ಪ್ರಚಲಿತದಲ್ಲಿವೆ.*

**Keywords:** *ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ, ಚಾಮುಂಡಿ ಬೆಟ್ಟ, ಕಥನಗೀತೆ, ಲಾವಣಿ.*

**ಪೀಠಿಕೆ**

ಕನ್ನಡದ ಪ್ರಮುಖ ಲಾವಣಿ ಸಂಪ್ರದಾಯಗಳಲ್ಲಿ ಕಂಸಾಳೆಯೂ ಕೂಡ ಒಂದಾಗಿದೆ. ಇವರು ಮಾದೇಶ್ವರನ ಕಥೆಯನ್ನು ಪ್ರಮುಖವಾಗಿ ಹಾಡುತ್ತಾರೆ. ದೇವರ ಉಪಾಸನೆ ಪುಣ್ಯದ ಕೆಲಸ ಎಂದು ನಂಬಿರುವ ಕಾರಣದಿಂದ ಈ ಕಥೆಗಳು ಇಂದಿಗೂ ಪುರಾಣಗಳ ರೂಪದಲ್ಲಿ ಅಸ್ತಿತ್ವದಲ್ಲಿದೆ. ಕನ್ನಡ ಲಾವಣಿ ಸಾಹಿತ್ಯಕ್ಕೆ ಕಂಸಾಳೆಯವರ ಕೊಡುಗೆ ಹಿರಿದಾದುದು. ಇಂತಹ ಸಾಹಿತ್ಯಕ ಕೊಡುಗೆಗಳಲ್ಲಿ 'ಬೆಟ್ಟದ ಚಾಮುಂಡಿ'ಯೂ ಒಂದಾಗಿದೆ. ಇದು ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಒಂದು ಪ್ರಣಯ ಕಾವ್ಯವಾಗಿದೆ. ಇಂತಹ ಅತ್ಯುತ್ತಮ ಕಾವ್ಯವನ್ನು ಸಂಪಾದಿಸಿ ಕನ್ನಡ ಜನಪದ ಲೋಕವನ್ನು ಶ್ರೀಮಂತಗೊಳಿಸಿದವರು ಪಿ.ಕೆ.ರಾಜಶೇಖರ ಅವರು. 'ಬೆಟ್ಟದ ಚಾಮುಂಡಿ' ಕೃತಿಯು ಹಲವಾರು ದೃಷ್ಟಿಗಳಿಂದ ವೈಶಿಷ್ಟ್ಯಪೂರ್ಣವಾದುದಾಗಿದೆ. ಕಂಸಾಳೆ ಸಂಪ್ರದಾಯದ ಈ ಪ್ರಸಿದ್ಧ ಲಾವಣಿಯು ಚಾಮುಂಡಿ ದೇವಿಯ ಸಮಗ್ರವಾಗಿ ಮತ್ತು ಸಮರ್ಪಕವಾಗಿ ಮಾಹಿತಿ ಒದಗಿಸುತ್ತದೆ. ಆದ್ದರಿಂದ ಐತಿಹಾಸಿಕವಾಗಿಯೂ ಈ ಕೃತಿಗೆ ಬಹಳ ಮಹತ್ವವಿದೆ. ಹಾಗಾಗಿ ಕನ್ನಡ ಅತ್ಯುತ್ತಮ ಜಾನಪದ ಸಂಗ್ರಹಗಳಲ್ಲಿ ಇದೂ ಒಂದು ಎಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

***Please cite this article as:*** ಉಷಾ ಎನ್ & ಕೆ ಸೌಭಾಗ್ಯವತಿ. (2023). ಬೆಟ್ಟದ ಚಾಮುಂಡಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(6), 104–111.

ಬೆಟ್ಟದ ಚಾಮುಂಡಿಯು ಒಂದು ಉತ್ತಮ ಜನಪದ ಸಾಹಿತ್ಯ ಕೃತಿಯಾಗಿದೆ. ಇದರಲ್ಲಿ ತಾಯಿ ಚಾಮುಂಡಿಯ ಪಾತ್ರವೇ ಪ್ರಧಾನ. ಇಲ್ಲಿನ ಕಥೆಯು ಎರಡು ಭಿನ್ನ ಘಟನೆಗಳನ್ನು ಹೊಂದಿದೆ. ಒಂದು ಮಹಿಷಾಸುರನ ಸಂಹಾರ, ಮತ್ತೊಂದು ಚಾಮುಂಡಿ–ನಂಜುಂಡರ ಪ್ರಣಯ. ಮೊದಲನೆಯ ಭಾಗವು ಶಿಷ್ಟ ಪುರಾಣದಿಂದ ಹೆಚ್ಚು ಪ್ರಭಾವಿತವಾಗಿದೆ. ಆದರೆ ಜನಪದ ಕಾವ್ಯದಲ್ಲಿ ಮಹಿಷಾಸುರನ ಸಂಹಾರ ಕಥೆಗೆ ಹೆಚ್ಚಾಗಿ ಒತ್ತು ಕೊಟ್ಟಿಲ್ಲ. ಬದಲಾಗಿ ಜನಪದರು ತಮ್ಮ ಆಸಕ್ತಿಯನ್ನೆಲ್ಲಾ ನಂಜುಂಡಚಾಮುಂಡಿಯರ ಪ್ರಣಯದ ಮೇಲೆ ಕೇಂದ್ರೀಕರಿಸಿದಂತೆ ತೋರುತ್ತದೆ.

'ಚಾಮುಂಡೇಶ್ವರಿ' ಎಂದೇ ಪರಿಚಿತವಾಗಿರುವ ಚಾಮುಂಡಿಯು ನಾಡಿನ ಶಕ್ತಿ ದೇವತೆ. ಚಾಮುಂಡಿಯು ಸಪ್ತಮಾತೃಕೆಯರ ಪೈಕಿ ಒಬ್ಬಳಾಗಿದ್ದು, ಅವಳನ್ನು ದುರ್ಗಾದೇವಿಯ ಪರಿಚಾರಕಿಯರಾದ ಅರವತ್ತನಾಲ್ಕು ಅಥವಾ ಎಂಬತ್ತೊಂದು ತಾಂತ್ರಿಕ ದೇವತೆಗಳಾದ ಮುಖ್ಯ ಯೋಗಿನಿಗಳಲ್ಲ ಒಬ್ಬಳೆಂದೂ ಸಹ ಗುರುತಿಸುತ್ತಾರೆ. 'ಚಾಮುಂಡಿ' ಎಂಬ ಹೆಸರು ಆಕೆಯ ಸಂಹರಿಸಿದ ಇಬ್ಬರು ಅಸುರರಾದ 'ಚಂಡ' ಮತ್ತು 'ಮುಂಡ' ಎಂಬ ಹೆಸರಿನ ಸಂಯೋಗವಾಗಿದೆ. ಲೋಕಕಂಟಕರಾಗಿದ್ದ ಚಂಡ–ಮುಂಡರನ್ನು ಕೊಂದು 'ಚಾಮುಂಡಿ' ಎಂಬ ಬಿರುದು ಧರಿಸಿದಳು. ಈಕೆ ಷೋಡಕಿ, ಅಂಬೆ, ಈಶ್ವರಿ, ಚಂಡಿ, ಕಾಳಿ, ಭಗವತಿ, ಮಹೇಶ್ವರಿ, ಮಹಾದೇವಿ, ತ್ರಿಪುರ ಸುಂದರಿ, ದುರ್ಗೆ ಹೀಗೆ ಹಲವು ಹೆಸರುಗಳಿಂದ ಕೀರ್ತಿಸಲ್ಪಡುತ್ತಾಳೆ.

ಮಹಿಷಾಸುರನ ಸಂಹಾರದ ನಂತರ ಮಹಿಷಮಂಡಲ (ಮೈಸೂರು) ವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಮಹಾಬಲಗಿರಿಯ ಮೇಲೆ ನೆಲೆಗೊಂಡಿದ್ದಾಳೆ. ಮಹಾಬಲಗಿರಿಯು ಹತ್ತನೆಯ ಶತಮಾನದ ಕಾಲಕ್ಕಾಗಲೀ ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿತ್ತು. ಇದಕ್ಕೆ ಮಬ್ಬೆಲದ ತೀರ್ಥ, ಮಾರ್ಬ ತೀರ್ಥ, ಮಹಾಬ ತೀರ್ಥ ಮೊದಲಾದ ಹೆಸರುಗಳಿದ್ದವು. ಇಲ್ಲ 'ಮಹಾಬಲೇಶ್ವರ' ನ ದೇವಾಲಯವಿದ್ದುದೇ ಈ ಹೆಸರು ಬರಲು ಕಾರಣವಾಗಿತ್ತು. ಕಾಲಾನಂತರದಲ್ಲಿ ಚಾಮುಂಡೇಶ್ವರಿಯು ಪ್ರಸಿದ್ಧವಾದಂತೆ ಸ್ಥಳದ ಹೆಸರು ಕೂಡ ಬದಲಾದಂತೆ ತೋರುತ್ತದೆ. ಮೈಸೂರು ಅರಸರು ಚಾಮುಂಡೇಶ್ವರಿಯನ್ನು ಕುಲದೇವತೆಯಾಗಿ ಸ್ವೀಕರಿಸಿ ಆಕೆಯ ಪೂಜೆ–ಪುನಸ್ಕಾರಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದರಿಂದ ಆಕೆಯ ಆಲಯವು ವಿಸ್ತಾರಗೊಂಡು ನಿಧಾನವಾಗಿ ಮಹಾಬಲೇಶ್ವರ ಪ್ರಾಮುಖ್ಯ ಇಳಿಮುಖಗೊಂಡಿರಬಹುದು.

ಜನಪದ ಪುರಾಣಗಳಲ್ಲಿ ಬರುವ ಚಾಮುಂಡಿಯ ವೃತ್ತಾಂತವನ್ನು ತಿಳಿಯುವ ಮೊದಲು ಶಿಷ್ಟ ಪುರಾಣಗಳಲ್ಲಿ ಬರುವ ಮಹಿಷಮರ್ದಿನಿಯ ಬಗೆಗೆ ದೊರೆಯುವ ಮಾಹಿತಿಗಳನ್ನು ಗಮನಿಸುವುದು ಅಗತ್ಯವೆನಿಸುತ್ತದೆ. ದೇವಿಯು ಮಹಾತ್ಮೆಯನ್ನು ತಿಳಿಸುವ ಶಿಷ್ಟ ಪುರಾಣಗಳಲ್ಲಿ ಪ್ರಮುಖವಾದವುಗಳೆಂದರೆ ಮಾರ್ಕಂಡೇಯ ಪುರಾಣ, ಕಾಳಿಕ ಪುರಾಣ, ಶ್ರೀದೇವಿ ಭಾಗವತ, ಸ್ಕಂದ ಪುರಾಣ ಹಾಗೂ ವರಾಹ ಪುರಾಣ. ಇವುಗಳಲ್ಲದೆ ಸೋಮೇಶ್ವರನ ಅಭಿಲಾಷಿತಾರ್ಥ ಚಿಂತಾಮಣಿ, ವಿಷ್ಣು ಧರ್ಮೋತ್ತರ ಪುರಾಣ, ಶಿಲ್ಪರತ್ನ, ಸನತ್ಕುಮಾರ ಶಿಲ್ಪಶಾಸ್ತ್ರ, ಹೇಮಾದ್ರಿಯ ಚತುರ್ವರ್ಗ ಚಿಂತಾಂಣಿ ಮುಂತಾದ ಗ್ರಂಥಗಳು ದೇವಿಯ ನಾನಾ ಗುಣಗಳ ಬಗ್ಗೆ ವಿವರಗಳನ್ನು ಒದಗಿಸುತ್ತವೆ. ಮಾರ್ಕಂಡೇಯ ಪುರಾಣವು ದೇವಿಯ ಮಹಾತ್ಮೆಯನ್ನು ಅದ್ಭುತವಾಗಿ ಚಿತ್ರಿಸಿದೆ. ದುರ್ಗೆಯ ಸಾಹಸಗಳ ಅಧ್ಯಯನದಲ್ಲಿ ಈ ಪುರಾಣವು ನಮಗೆ ಮುಖ್ಯವಾದ ಆಧಾರ ಗ್ರಂಥವಾಗಿದೆ. (ರಾಜಶೇಖರ ಪಿ.ಕೆ. ಪು.29)

ಹೀಗೆ ಚಾಮುಂಡೇಶ್ವರಿಯ ಬಗೆಗೆ ವಿವಿಧ ಪುರಾಣಗಳು ವಿವಿಧ ಬಗೆಯ ಮಾಹಿತಿಗಳನ್ನು ನೀಡುತ್ತವೆ. ಅನೇಕ ದಂತಕಥೆಗಳೂ ಕೂಡ ಜನಮಾನಸದಲ್ಲಿ ಪ್ರಚಲಿತದಲ್ಲಿವೆ. ಅದರ ಪ್ರಕಾರ ಮಹಿಷಾಸುರನೆಂಬ ರಾಕ್ಷಸನು ಮಹಿಷಮಂಡಲವನ್ನು ಆಳುತ್ತಿದ್ದನು. ಆತ ಬ್ರಹ್ಮ ದೇವರನ್ನು ಕುರಿತು ಹಲವು ವರ್ಷಗಳ ಕಠಿಣ ತಪಸ್ಸನ್ನು ಮಾಡುತ್ತಾನೆ. ಬ್ರಹ್ಮ ದೇವರು ಪ್ರತ್ಯಕ್ಷರಾಗಿ ಆತ ಕೇಳಿದ ವರವನ್ನು ಕರುಣಿಸುತ್ತಾರೆ. ಹೀಗೆ ವರ ಪಡೆದು ಮೃತ್ಯುವಿನ ಭಯದಿಂದ ಮುಕ್ತನಾದ ಮಹಿಷನು ಸಾಮಾನ್ಯ ಜನರನ್ನು, ದೇವತೆಗಳನ್ನು ಪೀಡಿಸತೊಡಗುತ್ತಾನೆ. ಆಗ ದೇವತೆಗಳೆಲ್ಲ ಶಿವನ ಪತ್ನಿ ಪಾರ್ವತಿಯ ಮೊರೆ ಹೋಗುತ್ತಾರೆ. ಪಾರ್ವತಿ ದೇವಿಯು ಆತನ ವಿರುದ್ಧ ಹೋರಾಡಲು ತಾನೇ ಸಜ್ಜಾಗುತ್ತಾಳೆ. ಮಹಿಷಾಸುರನ ವಿರುದ್ಧ ಹೋರಾಡಲು ಸಾಗಾಗುವಷ್ಟು ಬಲವನ್ನು ತ್ರಿಮೂರ್ತಿಗಳು ಹಾಗೂ ಸ್ವರ್ಗದಲ್ಲಿರುವ ಎಲ್ಲಾ ದೇವರುಗಳು ಆಕೆಗೆ ಧಾರೆ ಎರೆಯುತ್ತಾರೆ. ಈ ಶಕ್ತಿಗಳಿಂದ ಪಾರ್ವತಿಯ ಚಾಮುಂಡೇಶ್ವರಿಯ ರೂಪವನ್ನು ಪಡೆಯುತ್ತಾಳೆ. ಮಹಿಷ ಮತ್ತು ಚಾಮುಂಡಿಯ ನಡುವೆ ಹತ್ತು ದಿನಗಳ ಯುದ್ಧ ನಡೆಯುತ್ತದೆ. ಕೊನೆಯ ದಿನದಲ್ಲಿ ಚಾಮುಂಡಿಯು ಮಹಿಷಾಸುರನನ್ನು ಸಂಹರಿಸುತ್ತಾಳೆ. ದುಷ್ಟ ಸಂಹಾರ ಮಾಡಿದ ದೇವಿಯು ಚಾಮುಂಡೇಶ್ವರಿಯಾಗಿ ಬೆಟ್ಟದಲ್ಲಿ ನೆಲೆ ನಿಲ್ಲುತಾಳೆ. ಇದು ಶಿಷ್ಟ ಪುರಾಣದಲ್ಲಿ ಬರುವ ಕಥೆಯಾದರೆ, ಜನಪದರು ಚಾಮುಂಡಿಯ ಬಗೆಗೆ ಬೇರೆಯದೇ ರೀತಿಯ ಕಥೆಯನ್ನು ಹೇಳುತ್ತಾರೆ.

ಜನಪದ ವಕ್ತೃಗಳ ಪ್ರಕಾರ ಉಜ್ಜಯಿನಿ ದೇಶದ ಬಿಜ್ಜಳರಾಯನಿಗೆ ಉರಿಮಸಣಿ, ಹುಣಸಮ್ಮ, ಹನ್ಯಾಳಮ್ಮ, ಕಿತ್ತೂರಮ್ಮ, ಕನ್ನಂಬಾಡಿ ಕಾಳಮ್ಮ, ಚೌಡಮ್ಮ ಮತ್ತು ಚಾಮುಂಡಿ ಎಂಬ ಹೆಸರಿನ ಏಳು ಜನ ಹೆಣ್ಣು ಮಕ್ಕಳು. ಇವರುಗಳು ಯಾವುದೋ ಕಾರಣಕ್ಕಾಗಿ ಪರಸ್ಪರ ಜಗಳವಾಡಿಕೊಂಡು ಉತ್ತರದಿಂದ ಹೊರಟು ಬೇರೆ ಬೇರೆ ಸ್ಥಳಗಳಲ್ಲಿ ನೆಲೆಗೊಂಡರಂತೆ. ಉರಿಮಸಣಿಯೇ ಇವರಲ್ಲೆಲ್ಲಾ ದೊಡ್ಡವಳು. ಇವಳು ಪಿರಿಯಾಪಟ್ಟಣದಲ್ಲಿ ನೆಲೆಸಿ ಪಿರಿಯಾಪಟ್ಟಣದಮ್ಮ ಆದಳು. ಉಳಿದವರು ಬೇರೆ ಬೇರೆ ಸ್ಥಳಗಳಲ್ಲಿ ನೆಲೆಗೊಂಡರು. ಕಿರಿಯವಳಾದ ಚಾಮುಂಡೇಶ್ವರಿ ತಾನು ಎಲ್ಲಿ ನೆಲೆಗೊಳ್ಳಬೇಕೆಂದು ಯೋಚಿಸುತ್ತಾ ಬರುತ್ತಿರುವಾಗ ಸಂಪದ್ಭರಿತವಾದ ಮಹಿಷಮಂಡಲ ಅವಳ ಕಣ್ಣಿಗೆ ಬಿತ್ತು. ಇದೇ ತಾನು ನೆಲೆಗೊಳ್ಳಲು ತಕ್ಕ ಸ್ಥಳವೆಂದು ನಿರ್ಧರಿಸಿ ಬಂದಾಗ ಆ ಮಂಡಲವನ್ನಾಳುತ್ತಿದ್ದ ರಾಕ್ಷಸರಾಜ ಮಹಿಷಾಸುರನ ಕಾವಲುಗಾರರು ತಡೆಯಲು ಬಂದು ಅವಳ ಉರಿಗಣ್ಣಿನ ಹೊಡೆತಕ್ಕೆ ತತ್ತರಿಸಿ ತಮ್ಮ ಒಡೆಯನ ಬಳಿಗೆ ಓಡಿಹೋಗಿ ದೂರು ಕೊಟ್ಟರು.

ಮಹಿಷಾಸುರನು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ತನ್ನ ದೇಹದ ಒಂದು ತೊಟ್ಟು ರಕ್ತವೇನಾದರೂ ಭೂಮಿಯ ಮೇಲೆ ಬಿದ್ದರೆ ಅದರಿಂದ ತನ್ನಷ್ಟೇ ಬಲಶಾಲಿಗಾದ ಕೋಟಿ ರಾಕ್ಷಸರು ಹುಟ್ಟಲಿ ಎಂಬ ವರವನ್ನು ಪಡೆದು ತನ್ನ ಹೆಸರಿನಲ್ಲೇ ಒಂದು ನಗರವನ್ನು ಕಟ್ಟಿಕೊಂಡು ಮೆರೆಯುತ್ತಿದ್ದನು. ತನ್ನ ರಾಜ್ಯಕ್ಕೆ ಹೆಣ್ಣೊಬ್ಬಳು ಬಂದು ತನ್ನ ಕಾವಲಿನವರನ್ನು ಹೆದರಿಸಿದ ಸುದ್ದಿ ಕೇಳಿ ತಾನೇ ಅವಳನ್ನು ಕಂಡು ಎದುರಿಸಲು ಮುಂದಾಗಿ ಬಂದನು. ಆಗ ಚಾಮುಂಡಿಯು ತನ್ನ ತಂಗಿ ಉತ್ತನಹಳ್ಳಿ ಉರಿಕಾತಿಯ ನೆರವಿನಿಂದ ಅವನನ್ನು ಸಂಹರಿಸಿ ಮಹಿಷಾಸುರ ಮರ್ದಿನಿಯಾದಳು. ಮಹಿಷನಾಳುತ್ತಿದ್ದ ನಾಡು 'ಮಹಿಷಮಂಡಲಿ', 'ಮಹಿಷಪುರೀ', ಮಹಿಲೂರು' ಎಂಬ ಹೆಸರಿನಿಂದಲೇ ಉಳಿದು ಈಗ ಮೈಸೂರಾಗಿದೆ.

ಚಾಮುಂಡೇಶ್ವರಿ ಮಹಿಷಾಸುರನನ್ನು ಸಂಹಾರ ಮಾಡುವ ಸಮಯಕ್ಕೆ ಸರಿಯಾಗಿ ತಿರುಪತಿಯಿಂದ ತಮ್ಮ ವೆಂಕಟರಮಣನನ್ನು ಬಿಟ್ಟು ಅಣ್ಣದಿಂರಾದ ನಂಜುಡೇಶ್ವರ ಮತ್ತು ಮಹದೇಶ್ವರ

ಮೈಸೂರಿಗೆ ಬಂದರು. ಚಾಮುಂಡಿಯ ರೌದ್ರ ನರ್ತನವನ್ನು ಕಂಡ ಮಹದೇಶ್ವರ ಇವಳೇನು ನಾರಿಯೋ ಮಾರಿಯೋ ಎಂದುಕೊಂಡು ತಮ್ಮ ನಂಜುಂಡನಿಗೆ 'ಪುಳ್ಳೆ' ಆಯು ಹೇಳಿ ಕ್ವಾರಣ್ಯಕ್ಕೆ ಹೊರಟನು. 'ಕ್ವಾರಣ್ಯ' ಮುಗಿಸಿ ಬಂದು ನೋಡಿದರೆ ನಂಜುಂಡ ಚಾಮುಂಡೇಶ್ವರಿಯ ಜೊತೆ ಉಯ್ಯಾಲೆಯಲ್ಲಿ ಕುಳಿತು ಸರಸವಾಡುತ್ತಿದ್ದಾನೆ! ಛೆ! ಇಂಥ ಪಾಪಿಗಳ ತಂಟೆ ನನಗೆ ಬೇಡವೆಂದು ಏಳುಮಲೆ ಕೈಲಾಸದ ದಿಕ್ಕಿಗೆ ಮಾದೇಶ್ವರ ಮುಖ ಮಾಡುತ್ತಾನೆ. ಚಾಮುಂಡಿಬೆಟ್ಟ ಮರೆಯಾಗುವವರೆಗೂ ಅವನು ಮುಂದೆ ಹೋಗಿ ನೆಲೆಸುತ್ತಾನೆ.

ಕಂಸಾಳೆ ಮಹದೇವಯ್ಯನವರು ಹಾಡಿರುವ ಪ್ರಸ್ತುತ 'ಬೆಟ್ಟದ ಚಾಮುಂಡಿ' ಕಾವ್ಯದಲ್ಲಿ ನಂಜುಂಡನು ನಂದಕಾಸುರನನ್ನು ಸಂಹಾರ ಮಾಡಿದುದಾಗಿ ತಿಳಿದುಬರುತ್ತದೆ. ಶಿಷ್ಟ ಪುರಾಣಗಳಲ್ಲಿ ಈ ಹೆಸರಿನ ಅಸುರ ಎಲ್ಲೂ ಬಂದಂತೆ ಕಾಣುವುದಿಲ್ಲ. ಆದರೆ ಮಹಿಷಾಸುರ ಸೇನೆಯಲ್ಲಿದ್ದ ಅಂಧಕಾಸುರನನ್ನು ಶಿವನು ಮರ್ಧಿಸಿದ ಸಂಗತಿ ಮತ್ಸ್ಯ ಪುರಾಣದಲ್ಲಿ ಬರುತ್ತದೆ. ಈ ಅಂಧಕಾಸುರನೆ ಜನಪದರ ಬಾಯಲ್ಲಿ ನಂದಕಾಸುರನಾಗಿ ಪರಿವರ್ತನೆ ಹೊಂದಿರಬಹುದು.

ಇನ್ನು ಉತ್ತನಹಳ್ಳಿ ಉರಿಕಾತಿಯನ್ನು ಚಾಮುಂಡೇಶ್ವರಿಯ ತಂಗಿ ಎಂದೇ ಎಲ್ಲಾ ಪಾಠಗಳೂ ಒಪ್ಪಿವೆ. ಕಂಸಾಳೆಯವರಲ್ಲಿ ಅವಳು ಮಹಿಷನ ಸಂಹಾರ ಸಮಯದಲ್ಲಿ ಚಾಮುಂಡಿಯ ಬೆವರಿನಿಂದ ಹುಟ್ಟಿದವಳು. ಶಿಷ್ಟ ಪುರಾಣಗಳ ಚಂಡಿಯ ಪಾತ್ರವನ್ನು ಇವಳು ಇಲ್ಲಿ ನಿರ್ವಹಿಸುತ್ತಾಳೆ.

ಕಂಸಾಳೆ ಮಹದೇವಯ್ಯನವರು ಹಾಡಿರುವ ಕಥನಕಾವ್ಯದಲ್ಲಿ ಮಹಿಷಾಸುರನ ಸಂಹಾರದಿಂದಲೇ ಕಥೆ ಆರಂಭವಾಗುತ್ತದೆ. ಅಲ್ಲದೇ ಇಲ್ಲಿನ ಒಂದು ವಿಚಿತ್ರವೆಂದರೆ ಮಹಿಷಾಸುರ ಮಾತ್ರವಲ್ಲದೇ 'ಐಸಾಸುರ' ಎಂಬ ರಾಕ್ಷಸನ ಪಾತ್ರವೂ ಬಂದಿದೆ. ಮಹಿರಾವಣ–ಅಹಿರಾವಣರಂತೆ, ಚಂಡ–ಮುಂಡರಂತೆ ಇಲ್ಲಿ ಮಹಿಷಾಸುರ–ಐಸಾಸುರ ಎನ್ನುವ ಜೋಡಿ ಹೆಸರುಗಳು ಬರುತ್ತವೆ. ಬೆಟ್ಟದ ಚಾಮುಂಡಿಗೆ ಮಹಿಷಾಸುರನನ್ನು ಸಂಹರಿಸುವಲ್ಲಿ ಯಾವುದೇ ಸಮಸ್ಯೆಗಳು ತಲೆದೋರುವುದಿಲ್ಲ. ಆತನನ್ನು ಆಕೆ ನಿರಾಯಾಸವಾಗಿ ಸಂಹರಿಸುತ್ತಾಳೆ. ಆದರೆ ಐಸಾಸುರನ ಸಂಹಾರ ಅಷ್ಟು ಸುಲಭವಲ್ಲ. ಐಸಾಸುರನು ಶಿಷ್ಟ ಪುರಾಣಗಳ ರಕ್ತಬೀಜಾಸುರನನ್ನು ಹೋಲುತ್ತಾನೆ. ಈ ಭಾಗವನ್ನು ಜನಪದರು ಶಿಷ್ಟ ಪುರಾಣಗಳ ಪ್ರಭಾವದಿಂದ ಎರವಲು ಪಡೆದಿರಬಹುದು. ಆದರೆ ಚಾಮುಂಡೇಶ್ವರಿಯ ವಿರುದ್ಧ ಹೋರಾಡಲು ಬರುತ್ತಿರುವ ಐಸಾಸುರನ ಚಿತ್ರವಂತೂ ಕಂಸಾಳೆಯವರದೇ ಪ್ರತಿಭೆಯಿಂದ ಹುಟ್ಟಿದ್ದು. ಅವನ ರೂಪವನ್ನು ಹೀಗೆ ವರ್ಣಿಸುತ್ತಾನೆ;

***ಗುಡ್ಡೇದ ಗಾತ್ರ ಕಣ್ಣಂತೆ***<br>
***ಮೂಲಂಗಿ ಗೆಡ್ಡೇದ ಗಾತ್ರ ಹಲ್ಲಂತೆ***<br>
***ಕೊಂಗದಂಗೆ ನಾಲಗೆ ಬುಟ್ಕೊಂಡು***<br>
***ಕೊಳಗದಂಗೆ ಬಾಯಿ ಬುಟ್ಕೊಂಡು***

ಹೀಗೆ ಭಯಂಕರನಾದ ಐಸಾಸುರನನ್ನು ಸಂಹಾರ ಮಾಡುವುದಕ್ಕೆ ಚಾಮುಂಡಿಯು ಕಷ್ಟಪಡುತ್ತಾಳೆ. ಇವಳ ಕಷ್ಟ ಬ್ರಹ್ಮನಿಗೂ, ಶ್ರೀಕೃಷ್ಣನಿಗೂ ಅರಿವಾಗಿ ಅವಳಿಗೆ ನೆರವಾಗಲೂ ಬ್ರಹ್ಮ ಉರಿಯಸಿಂಹವನ್ನು ಕಳುಹಿಸುತ್ತಾನೆ. ಶ್ರೀ ಕೃಷ್ಣ ತಾನೇ ಗರುಡ ವೇಷದಲ್ಲಿ ಬರುತ್ತಾನೆ. ಆಗ ಚಾಮುಂಡಿ ಸುಸ್ತಾಗಿ ತನ್ನ ಹಣೆ ಬೆವರನ್ನು ತೆಗೆದು ನೆಲಕ್ಕೆಸೆಯುತ್ತಾಳೆ. ಆ ಬೆವರಿನಲ್ಲೇ ಉರಿಕಾತಿ

ಉತ್ಪತ್ತಿಯಾಗಲೆಂದು ಶ್ರೀ ಕೃಷ್ಣನು ವರ ನೀಡುತ್ತಾನೆ. ಹೀಗೆ ಹುಟ್ಟಿದ ಉರಿಕಾತಿಯು ಚಾಮುಂಡಿಯ ಬಳಿಗೆ ಬಂದು ತನ್ನನ್ನು ಪರಿಚಯಿಸಿಕೊಂಡು,

***ನಾಲ್ಗೆಯ ಮೇಲೆ ನಿಂತು***
***ಕಾಳಗ ಮಾಡಕ್ಕಯ್ಯ***

ಎನ್ನುತ್ತಾಳೆ. ಆಗ ಐಸಾಸುರನಿಗೆ ಚಾಮುಂಡಿಯ ಹೊಡೆತ ಹೆಚ್ಚಾಗಿ ಕೋಣನೊಳಗೆ ಅಡಗಿಸಿಕೊಳ್ಳುತ್ತದೆ. ಚಾಮುಂಡಿ ಆ ಕೋಣವನ್ನು ತಿವಿದು ಅಡಗಿದ್ದ ಅಸುರನನ್ನು ಹೊರಬರಿಸಿ ಹತ್ತು ಭುಜ ಇಪ್ಪತ್ತು ಕೈಗಳಿಂದ ಉರಿಸಿಂಹವನ್ನೇರಿ ಬಂದು ಅವನನ್ನು ಸಂಹರಿಸುತ್ತಾಳೆ. ಇಲ್ಲಿಂದ ಮುಂದೆ ನಂಜುಂಡ–ಚಾಮುಂಡಿಯರ ಪ್ರಣಯ ಪ್ರಸಂಗ ಆರಂಭವಾಗುತ್ತದೆ. ರಾಕ್ಷಸರ ಸಂಹಾರವಾದ ಮೇಲೆ ಉರಿಕಾತಿಯನ್ನು ಉತ್ತನಹಳ್ಳಿಯಲ್ಲಿ ನೆಲೆಗೊಳ್ಳಲು ಹೇಳಿ ತಡರಾತ್ರಿಯಲ್ಲಿ ಕಲ್ಲುನೀರು ಕರಗುವ ಹೊತ್ತಿನಲ್ಲಿ ಚಾಮುಂಡಿ ಸ್ನಾನ ಮಾಡುವುದಕ್ಕಾಗಿ ಕಬಿನಿ ನದಿಗೆ ಬರುತ್ತಾಳೆ. ಸ್ನಾನ ಮಾಡಿ ಮಡಿಯುಟ್ಟು ತನ್ನ ನೀಳವಾದ ಕೇಶರಾಶಿಯನ್ನು ಚಿನ್ನದ ಬಾಚಣಿಗೆಯಲ್ಲಿ ಬಾಚುತಾ್ತ ನಿಂತಿರುವಾಗ ಅಲ್ಲಿಗೆ ಬಂದ ನಂಜುಂಡೇಶ್ವರನು ಸೂರ್ಯಕೋಟಿಗೆ ಸಮನಾಗಿ ಹೊಳೆಯುತ್ತಿದ್ದ ಚಾಮುಂಡಿಯನ್ನು ಕಂಡು ಮೋಹಕ್ಕೊಳಗಾಗುತ್ತಾನೆ. ಆದರೆ ಅವನಿಗೆ ಈಗಾಗಲೇ ಇಬ್ಬರು ಪತ್ನಿಯರಿದ್ದಾರೆ. ಒಬ್ಬಳು ವಿಷ್ಣುವಿನ ತಂಗಿ ಸೋಮಾಜಮ್ಮ, ಮತ್ತೊಬ್ಬಳು ದೇವೇಂದ್ರನ ಮಗಳು ದುಂಡು ದೇವೀರಮ್ಮ. ಆದರೆ ಇವರಿಬ್ಬರನ್ನೂ ಮೀರಿಸುವ ರೂಪವತಿ ಚಾಮುಂಡೇಶ್ವರಿ. ಅವಳ ರೂಪರಾಶಿ ಅವನನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ತಕ್ಷಣ ಆತ ಹಿಂದುಮುಂದು ನೋಡದೆ ಓಡಿ ಹೋಗಿ ಅವಳ ಕೈ ಹಿಡಿದುಕೊಳ್ಳುತ್ತಾನೆ. ಅನಿರೀಕ್ಷಿತವಾದ ಈ ಘಟನೆಯಿಂದ ಗಾಬರಿಗೊಂಡ ಚಾಮುಂಡಿಯು ಕೈ ಬಿಡಿಸಿಕೊಂಡು ದೂರ ಹೋಗಿ ನಿಲ್ಲುತ್ತಾಳೆ. ನಂಜುಂಡನು ತಾನು ನಂದಕಾಸುರನನ್ನು ಸಂಹರಿಸಿ ನಂಜನಗೂಡಿನಲ್ಲಿರುವವನು ಎಂದು ಪರಿಚಯವನ್ನು ಮಾಡಿಕೊಡುತ್ತಾನೆ. ಚಾಮುಂಡಿ ತಾನು ಮಾವೂರು ಲಿಂಗಯ್ಯನ ಮಗಳು ಎಂದಾಗ ಇವನು ಉಬ್ಬಿ ಮಾವೂರ ಲಿಂಗಯ್ಯ ತನ್ನ ಸ್ವಂತ ಸೋದರಮಾವ ನೀನು ನನಗೆ ಸಾಲಾವಳಿ ಎನ್ನುತ್ತಾನೆ. ನನ್ನನ್ನು ಮದುವೆಯಾಗೆಂದು ಅಂಗಲಾಚುತ್ತಾನೆ ತನಗೆ ಈಗಾಗಲೇ ಇಬ್ಬರು ಹೆಂಡತಿಯರು ಇರುವುದಾಗಿಯೂ ಹೇಳುತ್ತಾನೆ. ಸವತಿಯರಿದ್ದ ಮೇಲೆ ನಾನು ನಿಮ್ಮನ್ನು ಮದುವೆಯಾಗಲಾರೆ ಎಂದ ಚಾಮುಂಡಿಯ ಮಾತಿನಿಂದ ನೊಂದ ನಂಜುಂಡೇಶ್ವರ ಚಾಮುಂಡೇಶ್ವರಿಯ ಪ್ರೀತಿಗಾಗಿ ಅವರಿಬ್ಬರನ್ನು ತೊರೆಯುವುದಾಗಿ ಸುಳ್ಳು ಹೇಳುತ್ತಾನೆ. ಒಲಿದ ಹೃದಯಗಳ ಮಧುರ ಸಂಗಮ ಚಾಮುಂಡಿ ಬೆಟ್ಟದ ಅವಳ ಅರಮನೆಯಲ್ಲೇ ನಡೆಯುತ್ತದೆ. ಮೂರು ವಾರಗಳ ಕಾಲ ಪ್ರೇಮ ಸಾಗರದಲ್ಲಿ ಮುಳುಗಿದ್ದ ನಂಜುಂಡೇಶ್ವರ ನಂಜನಗೂಡಿಗೆ ಬಂದಿರುವ ಭಕ್ತರಿಗೆ ವರ ಕೊಡುವ ನೆಪದಿಂದ ಬೆಟ್ಟವನ್ನು ಬಿಟ್ಟು ಹೊರಡುತ್ತಾನೆ.

ಕಂಸಾಳೆಯವರಲ್ಲಿ ಬರುವ ಚಾಮುಂಡಿಯ ಕನಸಿನ ಪ್ರಸಂಗವಾಗಲಿ ಉತ್ತನಹಳ್ಳಿ ಉರಿಕಾತಿ ತನ್ನ ಭಾವನಾದ ನಂಜುಡೇಶ ್ವರನನ್ನು ಬಾವುಣಿಸಿ ಕರೆಯುವ ಪ್ರಸಂಗ ಉಳಿದ ಯಾವ ಕಥನಗಳಲ್ಲೂ ಕಂಡುಬರುವುದಿಲ್ಲ. ಬೇಗ ಬರುತ್ತೇನೆಂದು ಹೇಳಿ ಹೋದ ನಂಜುಂಡ ಎಷ್ಟು ದಿನವಾದರೂ ಬಾರದೇ ಹೋದುದನ್ನು ಕಂಡ ಚಾಮುಂಡಿ ವಿರಹದಲ್ಲಿ ಕೊರಗುತ್ತಾಳೆ. ದುಃಸ್ವಪ್ನವನ್ನು ಕಂಡು ಬೆದರುತ್ತಾಳೆ. ತನ್ನ ತಂಗಿಯನ್ನು ಕರೆಸಿ ತನ್ನ ಕನಸಿನ ಬಗೆಗೆ ವಿವರಿಸಿ ಭಯಭೀತಳಾಗುತ್ತಾಳೆ. ಭಾವನಾದ ನಂಜುಂಡೇಶ್ವರನನ್ನು ಬಹಳ ಪ್ರೀತಿಯಿಂದ, ಅಕ್ಕರೆಯಿಂದ, ಗೌರವಪೂರ್ಣವಾಗಿ ಕರೆಯುತ್ತಾಳೆ. ಇದು ಜನಪದ ಸಾಹಿತ್ಯ ಲೋಕದ ಒಂದು ಅಪೂರ್ವ ಭಾವಗೀತೆಯಂತಿದೆ. ಭಾವನನ್ನು ಬಗೆಬಗೆಯಾಗಿ

ಬಣ್ಣಿಸುತ್ತಾಳೆ. ನಾನಾ ರೀತಿಯಲ್ಲಿ ಪ್ರಾರ್ಥಿಸುತ್ತಾಳೆ. ಕೊನೆಗೆ ಮೂರು ಮಾತನ್ನು ಕರೆದು ಮೂರು ಮಾತನ್ನು ಕೂಗಿ ಬೆಟ್ಟಕ್ಕೆ ಬರುತ್ತಾಳೆ.

ಉತ್ತನಹಳ್ಳಿ ಮಾರಮ್ಮನ ದನಿಯನ್ನು ಕೇಳಿಸಿಕೊಂಡು ಹೊರಟ ನಂಜುಂಡನನ್ನು ದೇವೀರಿ ತಡೆದು, ಕೋಳಿ ಕುರಿ ತಿನ್ನೋ ಅವಳ ಮನೆಗೆ ಹೋಗುವುದು ನಿಮಗೆ ತರವೆ? ಎಂದು ಆಕ್ಷೇಪ ಎತ್ತುತ್ತಾಳೆ. ನಂಜುಂಡ ಏನೋ ಸುಳ್ಳು ಹೇಳಿ ಅದರಿಂದ ನುಣುಚಿಕೊಳ್ಳುತ್ತಾನೆ. ಹೆಂಡತಿಯರು ನಿದ್ರೆ ಮಾಡುತ್ತಿರುವಾಗ ತಲೆದಿಂಬನ್ನೇ ಮಧ್ಯೆ ಮಲಗಿಸಿ ಹೊದಿಕೆ ಹೊದಿಸಿ ಅದನ್ನೇ ನಿಮ್ಮ ಗಂಡ ನಂಜುಂಡ ಎಂದು ಭಾವಿಸಿ ತಬ್ಬಿಕೊಳ್ಳಿ ಎಂದು ಅಲ್ಲಿಂದ ಓಟ ಕೀಳುತ್ತಾನೆ. ಅಲ್ಲಿಂದ ಹೊರಟವನಿಗೆ ಕಾಳಿಂಗ ಮತ್ತು ಬಸವಣ್ಣ ತಡೆದು ಹೆದರಿಸುತ್ತಾರೆ. ಅವರಿಗೆಲ್ಲಾ ಇಲ್ಲಸಲ್ಲದ ಸುಳ್ಳು ಹೇಳಿ ಲಂಚದ ಆಸೆ ಹುಟ್ಟಿಸಿ ಬೆಟ್ಟದ ಚಾಮುಂಡಿಯ ಮನೆಗೆ ಓಡಿ ಬರುತ್ತಾನೆ.

ಗಂಡನನ್ನು ಹುಡುಕಿಕೊಂಡು ಬಂದ ದೇವೀರಿ ಚಾಮುಂಡಿಗೂ ದೊಡ್ಡ ಜಗಳವೇ ಆಗುತ್ತದೆ. ಬಾಯಿಗೆ ಬಂದಂತೆ ಬೈದು ಗಂಡನನ್ನು ನಂಜನಗೂಡಿಗೆ ಎಳೆದುಕೊಂಡು ಹೋಗಿ ಬಟ್ಟೆಬರೆಯನ್ನೆಲ್ಲಾ ಕಳಚಿಕೊಂಡು ಬೆತ್ತಲೆಯಲ್ಲೇ ಹೊರಹಾಕುತ್ತಾಳೆ. ತೇರಿಗೆ ಕಟ್ಟಿದ ದಾಳದ ಬಟ್ಟೆಯನ್ನು ಮೈಗೆ ಸುತ್ತಿಕೊಂಡ ನಂಜುಂಡ ಬ್ರಹ್ಮಲೋಕಕ್ಕೆ ಹೋಗಿ ಅವನನ್ನು ಸುಳ್ಳುಶಾಸ್ತ್ರ ಹೇಳುವಂತೆ ಪ್ರೇರೇಪಿಸಿ ಚಾಮುಂಡಿ ಅರಮನೆಗೆ ಬಂದು ಕೊರವಂಜಿ ವೇಷ ತಾಳಿಕೊಂಡು ಬರಲು ಹೇಳಿ ನಂಜನಗೂಡಿಗೆ ಬಂದು ಸತ್ತವನಂತೆ ಮಲಗುತ್ತಾನೆ.

'ಸತ್ತವರ ಬದುಕಿಸಬಲ್ಲೆ ಬದುಕಿದೋರ ಸಾಯಿಸಬಲ್ಲೆ' ಎಂದು ಕಣಿ ಸಾರುತ್ತ ಕೊರವಂಜಿ ಬಂದದ್ದು ದೇವೀರಿ ಸೋಮಾಜಮ್ಮನಿಗೆ ಹೋದ ಜೀವ ಬಂದಂತಾಗುತ್ತದೆ. ಹೇಗಾದರೂ ಸರಿ ಗಂಡನುಳಿದು ಮಾಂಗಲ್ಯ ಭಾಗ್ಯ ತಮ್ಮ ಪಾಲಿಗೆ ಉಳಿದರಷ್ಟೇ ಸಾಕು ಎಂದು ಕೊರವಂಜಿ ಹೇಳಿದ್ದಕ್ಕೆಲ್ಲ ತಲೆಯಾಡಿಸುತ್ತಾರೆ. ಚಾಮುಂಡಿಗೆ ಹರಕೆಯನ್ನು ಕಟ್ಟಿಸುತ್ತಾರೆ. ಅವಳೂ 'ಮರುಜವಳ ಕಡ್ಡಿ'ಯಿಂದ ನಿವಾಳಿಸುತ್ತಾಳೆ. ಆಗ ನಂಜುಂಡ ಅಲ್ಲಿಯವರೆಗೆ ನಟನೆ ಮಾಡುತ್ತಿದ್ದವನು ಜೀವ ಬಂದವನಂತೆ ಎದ್ದು ಕೂರುತ್ತಾನೆ. ತನಗೆ ಏನೂ ಗೊತ್ತಿಲ್ಲವೆಂದು ನಾಟಕವಾಡುತ್ತಾನೆ. ಇದೆನ್ನೆಲಾ ್ಲ ಅರಿಯದ ಅವನ ಹೆಂಡತಿಯರು ಅವನನ್ನು ಒತ್ತಾಯಿಸಿ ಚಾಮುಂಡಿಯ ಅರಮನೆಗೆ ಕಳುಹಿಸುತ್ತಾರೆ. ಆತ ಹೋಗುವಾಗ ತಮ್ಮ ವಸ್ತ್ರ ಆಭರಣಗಳನ್ನು ಕೊಟ್ಟು ಕಳುಹಿಸುತಾ ್ತರೆ. ಹೀಗೆ ನಂಜುಂಡನ ಕಥೆ ಸುಖಾಂತವಾಗುತ್ತದೆ.

ಕಂಸಾಳೆಯವರ ಈ ಕಥಾ ನಿರೂಪಣೆಯಲ್ಲಿ ಹೆಚ್ಚು ತೊಡಕುಗಳಿಲ್ಲ. ಅವರ ಕಾವ್ಯ ಒಂದರ್ಥದಲ್ಲಿ ಚಂಪೂಕಾವ್ಯದಂತೆಯೇ ಇದೆ. ಕಾರಣ ಇದು ಗದ್ಯ–ಪದ್ಯ ಮಿಶ್ರಿತವಾದ ಕಾವ್ಯ. ಬೇಕೆಂದಲ್ಲಿ ನಿರರ್ಗಳವಾಗಿ ವಚನದಲ್ಲಿ ಕಥೆಯನ್ನು ಹೇಳಿ ಮುಗಿಸಿ ಅಲ್ಲಲ್ಲಿ ಪದ್ಯವನ್ನು ಸೇರಿಸುತಾ ್ತರೆ. ಒಟ್ಟಿನಲ್ಲ ಕಂಸಾಳೆಯವರ 'ಚಾಮುಂಡಿ ಪುರಾಣ' ಸಮಗ್ರ ರೂಪದಲ್ಲ ದೊರೆತಿದ್ದು ಉತ್ತಮ ಪುರಾಣ ಕಾವ್ಯವಾಗಿದೆ.

ಜನಪದರಿಂದ ಹುಟ್ಟಿಕೊಂಡ ಈ ಕಾವ್ಯ ನೈಸರ್ಗಿಕವಾದುದೇ ಹೊರತು ಶಿಷ್ಟ ಕವಿಗಳಂತೆ ಕುಳಿತು ಕಟ್ಟಿದ ಕಾವ್ಯವಲ್ಲ. ಇದರಲ್ಲಿ ಆಡಂಬರವಾಗಲೀ, ಅತಿರೇಕವಾಗಲೀ ಇಲ್ಲ. ವರ್ಣನೆಗಳಾಗಲೀ, ಶಬ್ಧಗಳ ಆಡಂಬರವಾಗಲೀ ಇಲ್ಲ. ಜನಸಾಮಾನ್ಯರು ದಿನನಿತ್ಯ ಬಳಸುವ ಭಾಷೆಯಲ್ಲಿಯೇ ಕಥೆ ಸಾಗುತ್ತದೆ. ಅಲ್ಲಲ್ಲಿ ಅನ್ಯ ಭಾಷೆಯ ಪದಗಳು ನುಸುಳಿಕೊಂಡಿರುವುದನ್ನು ನಾವು ಗಮನಿಸಬಹುದು. ಉದಾಹರಣೆಗೆ: 'ಸಪೋಟು', 'ಡಾಯಿ' ಹೀಗೆ ಅನೇಕ ಇಂಗ್ಲೀಷ್, ಹಿಂದಿ, ಉರ್ದುವಿನ ಪದಗಳು

ಕನ್ನಡದ ಪದಗಳು ಎಂಬಂತೆಯೇ ಬಳಕೆಯಾಗಿವೆ. ಅಲ್ಲದೇ ಹಲವೆಡೆ ತೀರ ಸಾಮಾನ್ಯವೆನಿಸುವ ದಿನನಿತ್ಯ ಬಳಸುವ ಪದಗಳನ್ನು ಜನಪದರು ಲೀಲಾಜಾಲವಾಗಿ ಬಳಸಿದ್ದಾರೆ. ಬೈಗುಳಗಳಂತೂ ಅಷ್ಟೇ ಸುಲಭವಾಗಿ ಬಂದು ಹೋಗುತ್ತವೆ. ಹಲವೆಡೆ ಜನಪದರು ದೇವರೆನ್ನುವುದನ್ನು ಮರೆತು ಸಾಮಾನ್ಯ ಮನುಷ್ಯರಿಗೆ ಬಯ್ಯುವಂತೆ ಬಾಯಿಗೆ ಬಂದಂತೆ ಬೈಯುವ ಪ್ರಸಂಗಗಳೂ ಸಹ ಇಲ್ಲಿ ಕಡಿಮೆ ಇಲ್ಲ. ಶಿಷ್ಟ ಪುರಾಣಗಳಲ್ಲಿ ಬಹಳ ಗಂಭೀರವಾಗಿರುವ ನಯ–ನಾಜೂಕಿನ ಕೆಲವೊಮ್ಮೆ ಭಯಂಕರ ರೂಪತಾಳಿ ಬೆಚ್ಚಿ ಬೀಳಿಸುವ ದೇವತೆಗಳು ಜನಪದರ ಕಾವ್ಯದಲ್ಲಿ ಸಾಮಾನ್ಯ ಮನುಷ್ಯರಂತೆ ವರ್ತಿಸುತ್ತಾರೆ. ಶಿಷ್ಟ ಕಾವ್ಯಗಳಲ್ಲಿ ಮದನಹಾರಿಯಾದ, ಮೋಹ ಮಾಯಗಳನ್ನು ಗೆದ್ದ ಶಿವ ಇಲ್ಲಿ ಚಾಮುಂಡಿಯನ್ನು ಕಂಡೊಡನೆ ಪಡ್ಡೆ ಹುಡುಗನಂತೆ ವರ್ತಿಸುತ್ತಾನೆ.

ಶಿಷ್ಟ ಕಾವ್ಯಗಳಲ್ಲಿ ಅರಿಷಡ್ವರ್ಗಗಳನ್ನು ಮೀರಿ ನಿಂತ ದೇವಾನುದೇವತೆಗಳ ಚಿತ್ರಣವನ್ನು ಕಂಡರೆ ಇಲ್ಲಿ ನಂಜುಂಡೇಶ್ವರನಾದಿಯಾಗಿ ಎಲ್ಲರಲ್ಲೂ ಸುಳ್ಳು ಹೇಳುವ, ಬೈಯುವ, ಹೊಟ್ಟೆಕಿಚ್ಚು ಪಡುವ ಗುಣಗಳು ಸುಲಭವಾಗಿ ಗೋಚರವಾಗುತ್ತವೆ. ಉದಾಹರಣೆ: ನಂಜುಂಡ ನಡುರಾತ್ರಿಯಲ್ಲಿ ಕದ್ದು ಚಾಮುಂಡಿ ಮನೆಗೆ ಬರುವುದು, ದೇವೀರಿ ಜಗಳವಾಡಿ ಕರೆತರುವುದು, ಬ್ರಹ್ಮನ ಸುಳ್ಳುಶಾಸ್ತ್ರ, ಚಾಮುಂಡಿಯ ಕೊರವಂಜಿ ವೇಷ, ನಂಜುಂಡ ಸತ್ತಂತೆ ನಾಟಕವಾಡುವುದು ಇತ್ಯಾದಿ.

ಇಲ್ಲಿ ಗಮನಿಸಬಹುದಾದ ಮತ್ತೊಂದು ಪ್ರಮುಖ ಅಂಶವೆಂದರೆ ಶಿಷ್ಟ ಕಾವ್ಯಗಳಲ್ಲಿ ಅಲ್ಲಲ್ಲಿ ಕಂಡು ಬರುವ ಶೈವ–ವೈಷ್ಣವರ ತಿಕ್ಕಾಟ ಇಲ್ಲಿ ಕಂಡು ಬರುವುದಿಲ್ಲ. ಬದಲಾಗಿ ಶಿವ ಮತ್ತು ವಿಷ್ಣುವಿನ ಬಾಂಧವ್ಯ ಇಲ್ಲ ಚೆನ್ನಾಗಿಯೇ ಮೂಡಿಬಂದಿದೆ. 'ಶಿವಾಯ ವಿಷ್ಣು ರೂಪಾಯ, ಶಿವ ರೂಪಾಯ ವಿಷ್ಣವೇ' ಎಂಬ ಮಾತು ಇಲ್ಲಗೆ ಅನ್ವಯವಾಗುತ್ತದೆ. ಜನಪದರರಲ್ಲಿ ಶೈವ–ವೈಷ್ಣವ ಎಂಬುದಾಗಲೀ ಅಥವಾ ಶಿವ–ವಿಷ್ಣು ಇವರಲ್ಲಿ ಯಾರು ಹೆಚ್ಚು ಎಂಬ ಗೊಂದಲಗಳಾಗಲೀ ಸುಳಿಯುವುದೇ ಇಲ್ಲ. ಶ್ರೀಕೃಷ್ಣ, ಶ್ರೀಮನ್ನಾರಾಯಣನ ಹೆಸರುಗಳು ಕಾವ್ಯದಲ್ಲಿ ಅಗತ್ಯವಾದ ಕಡೆಗಳಲ್ಲೆಲ್ಲಾ ಬರುತ್ತದೆ. ಶ್ರೀಕೃಷ್ಣನು ಚಾಮುಂಡಿಯ ಕಷ್ಟ ನೋಡಲು ಸಾಧ್ಯವಾಗದೇ ತಾನೇ ಗರುಡ ರೂಪದಲ್ಲಿ ಬಂದು ಸಹಾಯ ಮಾಡುತ್ತಾನೆ. ಶ್ರೀಮನ್ನಾರಾಯಣ ತನ್ನ ತಂಗಿಯನ್ನು ನಂಜುಂಡೇಶ್ವರನಿಗೆ ಕೊಟ್ಟು ವಿವಾಹ ಮಾಡಿದ್ದಾನೆ. ಹೀಗೆ ಶಿವ ಮತ್ತು ವಿಷ್ಣು ಇಲ್ಲಿ ಆಪ್ತ ಸಂಬಂಧಿಕರೇ ಆಗಿದ್ದಾರೆ. ಶೈವ ಮತ್ತು ಶ್ರೀ ವೈಷ್ಣವ ಧರ್ಮದ ಅಪೂರ್ವ ಮಿಲನವನ್ನು ನಾವಿಲ್ಲಿ ಗುರುತಿಸಬಹುದು.

ಕಥೆಯು ಮೈಸೂರಿನ ಸುತ್ತಮುತ್ತ ನಡೆಯುವುದರಿಂದ ಇಲ್ಲಿನ ಭೌಗೋಳಿಕ ಪರಿಸರದ ವರ್ಣನೆ ಮತ್ತು ಸ್ಥಳಗಳ ಹೆಸರುಗಳು ಇಲ್ಲಿ ಉಲ್ಲೇಖಗೊಂಡಿವೆ. ಚಾಮುಂಡಿ ಬೆಟ್ಟದ ವರ್ಣನೆ, ನಂಜುಂಡ ಚಾಮುಂಡಿ ಬೆಟ್ಟದ ಮೆಟ್ಟಿಲಿ ಏರಿ ಬಂದು ಸುಸ್ತಾದ ಪ್ರಸಂಗ, ಮೈಸೂರಿನ ವರ್ಣನೆ; ಉತ್ತನಹಳ್ಳಿ ಲಲಿತಾದ್ರಿಪುರ, ನಂಜನಗೂಡು, ಸಾಕ್ಕಳ್ಳಿ, ದೊಡ್ಡಕೆರೆ ಏರಿ, ತಾಳುಬೆಟ್ಟ ಹೀಗೆ ಈ ಸ್ಥಳಗಳ ಬಗೆಗೂ ಕಾವ್ಯ ಮಾಹಿತಿ ಒದಗಿಸುತ್ತದೆ. ಈ ಕಾವ್ಯದಲ್ಲಿ ಇತಿಹಾಸದ ತೆಳುಪದರವನ್ನು ಗುರುತಿಸಬಹುದು. ಆದರೆ ಇದು ಇತಿಹಾಸ ಎಂದು ಕರಾರುವಕ್ಕಾಗಿ ಹೇಳುವುದು ಸಾಧ್ಯವಿಲ್ಲ. ಕಥೆಯಲ್ಲಿ ಬರುವ ಪಾತ್ರಗಳು ಜನಸಾಮಾನ್ಯರ ಜೀವನದಿಂದ ಪ್ರೇರಣೆ ಪಡೆದು ಹುಟ್ಟಿಕೊಂಡವುಗಳಿರಬಹುದು. ಒಟ್ಟಿನಲ್ಲಿ ಕಥೆಯು ಪ್ರಾಕೃತಿಕವಾಗಿ ಸಹಜವಾಗಿ ಮೂಡಿ ಬಂದುದಾಗಿದ್ದು ಸರಳ ನಿರೂಪಣೆ, ಸುಲಭ ಗಮ್ಯವಾದ ಶೈಲಿಯಿಂದ ಓದುಗರ ಮನಸೆಳೆಯುತ್ತದೆ. ಜನಪದರು ದೇವಮಾನವರನ್ನು ತಮ್ಮ ಬದುಕಿನಲ್ಲಿ ಲೀನಗೊಳಿಸಿಕೊಂಡು ಹಾಡಿ, ಕುಣಿದು ಅವರನ್ನೂ ತಮ್ಮಂತೆಯೇ ಭಾವಿಸಿ ಜೀವನ ಸಾರ್ಥಕತೆಯನ್ನು ಕಂಡುಕೊಂಡಿದ್ದಾರೆ. ಋಷಿಮುನಿಗಳು ತಪಸ್ಸು ಮಾಡಿ ಕೈಲಾಸ, ವೈಕುಂಠಗಳಲ್ಲಿ ದೇವರನ್ನು ಅರಸುತ್ತಾ

ಸಾಗಿದರೆ ನಮ್ಮ ಜನಪದರು ದೇವರನ್ನು ಹುಡುಕಲು ಎಲ್ಲಿಯೂ ಹೋಗದೆ ದೇವರನ್ನೇ ತಮ್ಮ ಮಧ್ಯೆ ಕರೆದುಕೊಂಡು ಅವರಿಗೂ ಸಾಮಾನ್ಯರಂತೆ ವೇಷವನ್ನು ತೊಡಿಸಿ, ಗುಣಗಳನ್ನು ಆರೋಪಿಸಿ ಅವರೂ ನಮ್ಮಂತೆಯೇ ಎಂಬುದನ್ನು ತೋರಿಸಿದರು. ಅಷ್ಟೋತ್ತರ, ಸಹಸ್ರನಾಮ, ಲಕ್ಷಾರ್ಚನೆಗಳಲ್ಲಿ ದೇವರನ್ನು ಹೊಗಳುವ ವೈದಿಕ ಸಂಪ್ರದಾಯಕ್ಕೆ ವಿರುದ್ಧವಾಗಿ ನಮ್ಮ ಜನಪದರು ವರ್ತಿಸುತ್ತಾರೆ. ದೇವರನ್ನು ಎಷ್ಟು ಪ್ರೀತಿಯಿಂದ ಮನವೊಲಿಸಲು ಅವರು ಬಲ್ಲರೋ, ಕೋಪ ಬಂದರೆ ಅಷ್ಟೇ ಕಠಿಣ ಶಬ್ಧಗಳಲ್ಲಿ ನಿಂದಿಸುವುದೂ ಸಹ ಅವರಿಗೆ ಗೊತ್ತು. ಹೀಗೆ ನಮ್ಮ ಜನಪದ ಕಾವ್ಯಗಳು ದೇಸೀಯ ಸೊಗಡನ್ನು ಹೆಚ್ಚಾಗಿ ಸೂಸುತ್ತವೆ. ಸಂಸ್ಕೃತ ಕಾವ್ಯಗಳಲ್ಲಿ ಕಂಡುಬರುವ ಗಾಂಭೀರ್ಯ, ಅಲಂಕಾರ, ಛಂದಸ್ಸು, ಅಷ್ಟಾದಶವರ್ಣನೆ, ಶಬ್ಧಾಭಂಡಾರ ಇದಾವುದರ ಭಾರವೂ ಜನಪದ ಕಾವ್ಯವನ್ನು ಕುಗ್ಗಿಸಿಲ್ಲ, ಬದಲಾಗಿ ಜನಸಾಮಾನ್ಯರ ಬಾಯಲ್ಲಿ ಲೀಲಾಜಾಲವಾಗಿ ಪ್ರವಹಿಸುವ ವಾಗ್ದೇವಿಯ ಅಮೂಲ್ಯ ನುಡಿಮುತ್ತುಗಳಾಗಿ ಇಂದಿಗೂ ನಲಿಯುತ್ತಿವೆ.

**ಪರಾಮರ್ಶನ ಗ್ರಂಥಗಳು**


- ಸಿಪಿಕೆ. (2004). *ಜಾನಪದ ತತ್ವ ಮತ್ತು ಸತ್ವ.* ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ.
- ಕಲಬುರ್ಗಿ ಎಂ.ಎಂ. (1995). *ಜಾನಪದ ಮಾರ್ಗ.* ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್.
- ರಾಜಶೇಖರ ಪಿ.ಕೆ. (ಸಂ.). *ಬೆಟ್ಟದ ಚಾಮುಂಡಿ.* ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ.
- ರಾಮಚಂದ್ರೇಗೌಡ ಹಿ.ಶಿ. (1998). *ಜಾನಪದ: ಸಾಂಸ್ಕೃತಿಕ ಆಯಾಮಗಳು.* ಕನ್ನಡ ಪುಸ್ತಕ ಪ್ರಾಧಿಕಾರ.
- ರಾಮೇಗೌಡ (ಸಂ.). (1983). *ಚಾಮಾಯಿ.* ಸಾಧನ ಸಾಹಿತ್ಯ ಮಂದಿರ.
- ನಾವಡ ಎ.ವಿ. (2015). *ಜಾನಪದ ಶೋಧ.* ಅಸ್ಮಿತೆ ಪ್ರಕಾಶನ.
- ವೀರಣ್ಣ ದಂಡೆ. (2003). *ದೇಸಿ–ಭಾಗ–1,* ಭಾಗ್ಯಶ್ರೀ ಎಂಟರ್ ಪ್ರೈಸಸ್.
- ವೀರಣ್ಣ ದಂಡೆ. (1982). *ಜನಪದ ಕಾವ್ಯಮೀಮಾಂಸೆ.* ಮೂಡಲ ಪ್ರಕಾಶನ.